# ಮೈಸೂರ ಗೆಜಿಟ.

ನಂ. 42.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ 37.

ಬೆಂಗಳೂರು, ಗುರುವಾರ, ಸೆಪ್ಟಂಬರ್ ತಾ॥ 12, ಸ್ ಸ್ 1907.

ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟನಂಬರ ಕೊಡಲ್ಪಡುತ್ತ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇನ್ಸ್ಟ್ರಾರ್ಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರಿಂಟೆಂಡೆಂಟರು, ರೆವಿನ್ಯೂ ಕಮ್ಮಿಷನರವರು, ಕರ್ಟ್ಟೋಲರವರು, ಪಬ್ಲಿಕ್ವರ್ಕ್ಸ್ ಆಫಿಸರಗಳು, ಫಾರಸ್ಟು, ರೆಜಿಸ್ಟ್ರೇರ್ಷ ವ ಎಡ್ಯುಟೇರ್ಷ ಇನ್ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ಬೋರ್ಡು ಪ್ರಸಿಡೆಂಟರು ಡಿಸ್ಟ್ರಿಕ್ಟು ವ ಸೆಷನ್ ಜಡ್ಜಿರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜಿರು, ಪೊಲೀಸ್ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇನ್ಸ್ಟ್ರಾರ್ಮೆಗಳು ವಗೈರ ಕ್ಷಾಲಸ್ಥಿತೀ ರಿಪೋರ್ಟುಗಳು; ಪೋಸ್ಟಿಂಗ್ಸ್ ನೋಟಿಸುಗಳು.

3ನೆ ಭಾಗ—ಲೆಜಿಸಲೇಟಿವ್ ರೆಗ್ಯುಲೇರ್ಷಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು—ಇಲ್ಲ.

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

## I ನೆ ಭಾಗ.

### ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇನ್ಸ್ಟ್ರಾರ್ಮೆಗಳು.

### ಜನರಲ್ ಮತ್ತು ರಿವಿನ್ಯೂ

ತಾರೀಖು 3ನೆ ಸೆಪ್ಟಂಬರು 1907.

ನಂ. 2127—ಸ್ಯಾನಿಟರಿ 213-06-3, ಸ್ಯಾನಿಟರಿ ಕಮಿಷನರಿಗೆ ಪರ್ಸನಲ್ ಅಸಿಸ್ಟೆಂಟಾಗಿರುವ ಮಿ॥ ಪಿ. ಪಲ್ಲು, ಎಲ್. ಎಂ. ಮತ್ತು ಎಸ್. ಮತ್ತು ಡಿ. ಪಿ. ಹೆಚ್., ರವರನ್ನು ಮೈಸೂರು ಸರ್ಕಾರಕ್ಕೆ ಡೆಪ್ಯುಟಿ ಸ್ಯಾನಿಟರಿ ಕಮಿಷನರನ್ನಾಗಿ ಮೊಕರರ್ರಾಡಿದೆ.

ತಾರೀಖು 3ನೆ ಸೆಪ್ಟಂಬರು 1907.

ನಂ. 2128—ಸ್ಯಾನಿಟರಿ 22-07-8, ಘನವನ್ನೆತ್ತಿದ ಮೈಸೂರು ಸೀಮೆಯ ರೆಸಿಡೆಂಟರ, ಮೊದಲನೆ ಅಸಿಸ್ಟೆಂಟರ 1907ನೆ ಇಸವಿಯ ಆಗಸ್ಟು 28ನೆ ತಾರೀಖು 812 ಪಿ. ನಂಬರುಳ್ಳ, ಇಂಡಾಸ್ರ್ಯುಮೆಂಟಿನೊಡನೆ ಬಂದ, ಇದರಡಿ ಕಂಡ ಮದರಾಸು ಸರ್ಕಾರದವರ ಇನ್ಸ್ಟ್ರಾರ್ಮೆಯನ್ನು ಸಮಸ್ತರ ತಿಳಿವಳಿಕೆಯ ಬಗ್ಗೆ ಪುನಃ ಪ್ರಕಟಿಸಿ ಇದೆ:—

ಬರುವ ಶ್ರೀ ವೆಂಕಟೇಶ್ವರಸ್ವಾಮಿ ಬ್ರಹ್ಮೋತ್ಸವದ ಕಾಲದಲ್ಲಿ ಉತ್ತರ ಆರ್ಕಾಟು ಡಿಸ್ಟ್ರಿಕ್ಟಿನ ಚಂದ್ರಗಿರಿ ತಾಲ್ಲೂಕಿನಲ್ಲಿರುವ ತಿರುಪುಲ್ಲೈ, ತಿರುಪತಿ ಮತ್ತು ತಿರುಚಾಣೂರುಗಳಿಗೆ ಸೇಲಂ, ಬಳ್ಳಾರಿ ಮತ್ತು ದಕ್ಷಿಣ ಕನ್ನಡ ಡಿಸ್ಟ್ರಿಕ್ಟುಗಳಲ್ಲಿ ಪ್ಲೇಗು ತಗು

ಲಿದ ತಾಲ್ಲೂಕುಗಳಿಂದಲೂ ಮತ್ತು ಮದರಾಸು ಆಧಿಪತ್ಯದೊಳಗೂ ಆದರ ಹೊರಗೂ ಪ್ಲೇಗು ತಗುಲಿರುವುದಾಗಿ ಪ್ರಸಿದ್ಧಪಡಿಸಲ್ಪಟ್ಟಿರುವ ಪ್ರದೇಶಗಳಿಂದಲೂ ಬರುವ ಯಾತ್ರಿಕರನ್ನು ಬಿಟ್ಟರೆ ಆ ಸ್ಥಳಗಳಲ್ಲಿ ಪ್ಲೇಗು ರೋಗ ಉಂಟಾಗುವ ಅಪಾಯವಿರುವುದಾಗಿ ಸಭಾಸವೇತರಾದ ಗವರ್ನರವರಿಗೆ ತೃಪ್ತಿಕರವಾದ ಕಾರಣಗಳು ಕಂಡು ಬಂದಿರುವುದರಿಂದ :

ಸಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ 1897ನೆ ಇಸವಿಯ ಆಕ್ಟಿನ ಮೇರೆ ಕೊಡಲ್ಪಟ್ಟ ಅಧಿಕಾರಗಳನ್ನು ನಡೆಸುವುದರಲ್ಲಿ ಸಭಾ-ಸವೇತರಾದ ಗವರ್ನರವರು, 190 ನೆ ಇಸವಿಯ ಸೆಪ್ಟಂಬರು ರಿಂದ 19ರವರೆಗೆ ಮತ್ತು ಅಕ್ಟೋಬರು ರಿಂದ 17ರ ವರೆಗೆ ಸದರಿ ಉತ್ಸವಕ್ಕೂ ತಿರುಚಾಣೂರು, ತಿರುಮಲೈ ಮತ್ತು ತಿರುಪತಿ, ಇವುಗಳಿಗೂ ಸದರಿ ಭಾಗಗಳಲ್ಲಿರುವ ಜನರು ಹೋಗಕೂಡದೆಂದು ನಿಷೇಧಿಸಿರುವುದಲ್ಲದೆ ಹಾಗೆ ಹೋಗಬೇಕೆಂದಿರುವ ಅಥವಾ ಹೋಗಬೇಕೆಂದಿರುವುದಾಗಿ ನಂಬಲ್ಪಟ್ಟಿರುವ ಯಾವ ಮನುಷ್ಯನಿಗಾದರೂ ಸದರಿ ತಾರೀಖುಗಳ ಮಧ್ಯೆ ರೈಲು ಮೂಲಕ ಪ್ರಯಾಣ ಮಾಡುವುದಕ್ಕೆ ಟಿಕೆಟ್ಟುಗಳನ್ನು ಬಳ್ಳಾರಿ ಮತ್ತು ದಕ್ಷಿಣ ಕನ್ನಡ ಡಿಸ್ಟ್ರಿಕ್ಟುಗಳಲ್ಲಿ ದಕ್ಷಿಣ ಇಂಡಿಯಾ (ಸೌತ್ ಇಂಡಿಯರ್) ರೈಲು ಮಾರ್ಗದಲ್ಲಿರುವ ಪಕಲ, ಪನಪಾಕಂ, ಚಂದ್ರಗಿರಿ, ಪಶ್ಚಿಮ ತಿರುಪತಿ, ಪೂರ್ವ ತಿರುಪತಿ, ರೇಣಿಗುಂಟೆ, ಯರಪೇಡು, ಕಾಳಹಸ್ತಿ, ಮತ್ತು ಯಲ್ಲಕುರು ಸ್ಟೇಷನ್ನುಗಳಿಗೂ, ಮದರಾಸು ರೈಲು ಮಾರ್ಗದಲ್ಲಿರುವ ಪುತ್ತೂರು, ತಡಕು, ಪುಡಿ, ರೇಣಿಗುಂಟೆ, ಮತ್ತು ಕೊದೂರು ಸ್ಟೇಷನ್ನುಗಳಿಗೂ ಮಾರಕೂಡದೆಂದೂ ಸಹ ವಿಧಿಸಿರುತ್ತಾರೆ.

2. ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಸದರಿ ಉತ್ಸವಕ್ಕೆ ಹೋಗುವ ಮನುಷ್ಯರೆಲ್ಲಾ ವಾಪಸು ಕಳುಹಿಸಲ್ಪಡುವರು.

ತಾರೀಖು 3ನೆ ಸೆಪ್ಟಂಬರ್ 1907.

ನಂ. 2129—ಸ್ಯಾನಿಟರಿ 61-07-2, ಘನವನ್ನೆತ್ತಿದ ಮೈಸೂರು ರೆಸಿಡೆಂಟರ ಮೊದಲನೆ ಅಸಿಸ್ಟೆಂಟರ 1907ನೆ ಇಸವಿಯ ಆಗಸ್ಟು 28ನೆ ತಾರೀಖಿನ 57ನೆ ನಂಬರುಳ್ಳ ಲೆಟರಿನೊಡನೆ ಬಂದು ತಲಪಿದ ಇದರಡಿ ಕಂಡ ಇಂಡಿಯಾ ಸರ್ಕಾರದ ಇಸ್ತಿಹಾರ್ನಾಮೆಯನ್ನು ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಮರಳಿ ಪ್ರಕಟಿಸಿದೆ :—

"ಇಂಡಿಯ ಸರ್ಕಾರದ ಹೋಂ ಇಲಾಖೆ, ಸ್ಯಾನಿಟೆರಿ, ನಂ. 1214.

ಪೊಕ್ಕಾಂ ಸಿಂಲಾ, 9ನೇ ಆಗಸ್ಟು 1907. ಇಸ್ತಿಹಾರ್ನಾಮೆ.

ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ 1897ನೆ ಇಸವಿಯ ಆಕ್ಟಿನ (1897ನೆ ಇಸವಿಯ 3ನೆ ಆಕ್ಟ್ಟು) 2ನೆ ಪ್ರಕರಣದ (1)ನೆ ಒಳ ಪ್ರಕರಣದಿಂದ ಕೊಡಲ್ಪಟ್ಟ ಅಧಿಕಾರಗಳನ್ನು ನಡೆಸುವುದರಲ್ಲಿ ಸಭಾಸವೇತರಾದ ಗವರ್ನರ್ ಜನರಲ್‌ರವರು ಅಪ್ಪಣೆ ದಯಪಾಲಿಸಿರುವುದೇನೆಂದರೆ :—ಇನ್ನೊಂದು ಹುಕುಂ ಕೊಡುವವರೆಗೆ ಇಂಡಿಯ ದೇಶದ ಯಾವ ನಿವಾಸಿಯಾದರೂ ಇದರಲ್ಲಿ ಮುಂದೆ ವಿಧಿಸಿರುವ ನಿಬಂಧನೆಗಳಿಗೆ ಒಳಪಟ್ಟು ಹಜ್ಜಿಗೆ ಹೋಗಬಹುದು :

(1) ಯಾವ ಮನುಷ್ಯನಿಗೂ, ಮೆಕ್ಕಾವಿಗೆ ಯಾತ್ರೆ ಹೋಗುವ ಉದ್ದೇಶದಿಂದ ಹಡಗೇರುವುದಕ್ಕೆ, ಬೊಂಬಾಯಿ ಆಧಿಪತ್ಯದಲ್ಲಿರುವ ಬೊಂಬಾಯಿ ರೇವಿನಲ್ಲಿ ವಿನಾ ಮತ್ತೆಲ್ಲಿಯೂ ಅವಕಾಶಕೊಡಕೂಡದು :

(2) ಯಾತ್ರಿಕರು ಹಡಗೇರುವುದಕ್ಕೆ ಮುಂಚಿತವಾಗಿ, ಜೆಡ್ಡಾವಿಗೆ ಹೋಗುವುದಕ್ಕೆ ಕರಾರು ಮಾಡಿರುವ ಹಡಗುಗಳಲ್ಲಿ, ರೇವಿನ ಹೆಲ್ತ್ ಆಫಿಸರ್ ಯಾ ಆರೋಗ್ಯ ರಕ್ಷಣೆಯ ಅಧಿಕಾರಿಯ ಖುದ್ದು ತಾಕೀದಿಯ ಮೇರೆ ಚೆನ್ನಾಗಿ ಕೊಳೆ ತೆಗೆದು ಕ್ಲೋರ್ಟ್ ಕ್ರಮದಿಂದ ಅವುಗಳಲ್ಲಿ ಶುದ್ಧಾಂಗವಾಗಿ ಇಲಿಗಳೇ ಇಲ್ಲದಹಾಗೆ ಮಾಡತಕ್ಕದ್ದು :

(3) ಹಡಗಿನಲ್ಲಿ ವಿಸ್ತಾರವಾದ ಆಸ್ಪತ್ರೆಯ ಸ್ಥಳವನ್ನು ಏರ್ಪಡಿಸತಕ್ಕದ್ದು :

(4) ಹಡಗೇರುವುದಕ್ಕೆ ಮೊದಲು ಯಾತ್ರಿಕರನ್ನು, ಸಾಮಾನ್ಯವಾದ ಸ್ಟೀವರುಗಳ ಮೇಲೆ ಮೂರನೆ ತರಗತಿಯ ಪ್ರಯಾಣಿಕರ ವಿಷಯದಲ್ಲಿ ಮಾಡುವ ಹಾಗೆ, ವೈದ್ಯಶಾಸ್ತ್ರದ ಪ್ರಕಾರ ಪರೀಕ್ಷೆ ಮಾಡಿ, ಅವರ ಬಟ್ಟೆಗಳನ್ನೂ ಮೂಟೆಗಳನ್ನೂ ರೋಗದ ಸೊಂಕಿಲ್ಲದ ಹಾಗೆ ಮಾಡತಕ್ಕದ್ದು.

(5) ಹಡಗುಗಳು ವಿರ್ಡ್, ಪೀರಿಂ, ಎಂಬ ಎರಡು ಕಡೆಗಳಲ್ಲಿಯೂ ಪುನಃ ವೈದ್ಯಶಾಸ್ತ್ರದ ಪ್ರಕಾರ ಅಜಮಾಯಿಷಿ ಮಾಡಲ್ಪಡತಕ್ಕದ್ದು : ಮತ್ತು

(6) ವಿಡನ್ನಿಗೆ ಖುದ್ದು ಸೇರುವ ಯಾತ್ರಿಕರ ಹಡಗಿನಲ್ಲಿ ಪ್ಲೇಗು ರೋಗವಿರುವುದಾಗಿ ಕಂಡುಬಂದರೆ, ಪೀರಿಮ್ಮಿಗೆ ತಂತೀ ಸಮಾಚಾರ ಕಳುಹಿಸತಕ್ಕದ್ದು : ಅಲ್ಲಿ ಆ ಹಡಗನ್ನು, 1903ನೆ ಇಸವಿಯ ಪ್ಲೇಗಿನ್ ಕನ್ವೆನ್ಷನ್ ಯಾ ಒಪ್ಪಂದದ 21 (3)ನೆ ನಿಬಂಧನೆಯಲ್ಲಿ ಕಂಡ ರೋಗ ತಗುಲಿದ ಹಡಗಾಗಿ ಭಾವಿಸಿ ಸದರಿ ನಿಬಂಧನೆಯಲ್ಲಿ ವಿಧಿಸಿರುವ ಏರ್ಪಾಡುಗಳನ್ನು ಖಂಡಿತವಾಗಿ ಮಾಡಿಸಿ, ಪೀರಿಮಿನಲ್ಲಿ ಮೊದಲು ರೋಗವು ಕಂಡು ಹಿಡಿಯಲ್ಪಟ್ಟ ಹಡಗುಗಳ ವಿಷಯದಲ್ಲಿಯೂ ಹೀಗೆಯೇ ನಡೆಸತಕ್ಕದ್ದು.

2. 1906ನೆ ಇಸವಿಯ ಸೆಪ್ಟಂಬರು 2ನೆ ತಾರೀಖಿನ 1749ನೆ ನಂಬರುಳ್ಳ ಹೋಂ ಇಲಾಖಾ ಇಸ್ತಿಹಾರ್ನಾಮೆಯಲ್ಲಿ ಇದ್ದ ಹುಕುಂಗಳನ್ನು ಇದರಿಂದ ರದ್ದುಮಾಡಿದೆ.

3. ಬೊಂಬಾಯಿ ಸರ್ಕಾರದವರು, ಪ್ರತಿ ಯಾತ್ರಾಕಾಲದ ಆರಂಭದಲ್ಲಿಯೂ, ಪೀರಿಮಿನಲ್ಲಿ, 190 ನೆ ಇಸವಿಯ ಪ್ಲೇಗಿನ್ ಕನ್ವೆನ್ಷನ್ ಯಾ ಒಪ್ಪಂದದ 21ನೆ ನಿಬಂಧನೆಯ ಮೇರೆ ಚಿಕಿತ್ಸೆ ಪಡೆಯುವುದಕ್ಕಾಗಿ ಪ್ಲೇಗು ತಗುಲಿದ ಬಂದು ಹಡಗಿನಿಂದ ಹಡಗುತುಂಬ ಬಂದ ಯಾತ್ರಿಕರನ್ನು ಇಳಿಸಿಕೊಳ್ಳುವುದಕ್ಕೆ ಆಗುವಂತೆ, ಯಾತ್ರಿಕರಿಗೋಸ್ಕರ ಪೂರ್ಣವಾಗಿ ಅಣಿಮಾಡಿರುವ ಬಂದು ಪ್ಲೇಗು ಅಜಮಾಯಿಷಿಯ ಸ್ಥಳವನ್ನು ಇಡತಕ್ಕದ್ದು."

ತಾರೀಖು 3ನೆ ಸೆಪ್ಟಂಬರು 1907.

ನಂ. ಜೆ. 708—ಪ್ರಿಜರ್ವ್ಸ್ 12-07-2, 1903ನೆ ಇಸವಿಯ ಜುಲೈ 16ನೆ ತಾರೀಖಿನ 144—ಜೆ. ಎಫ್ 97—98ನೆ 16, ಈ ನಂಬರುಳ್ಳ ಇಸ್ತಿಹಾರ್ನಾಮೆಯನ್ನು ರದ್ದುಮಾಡಿ, ಸಂಸ್ಥಾನದಲ್ಲಿರುವ ಹುಚ್ಚಾಸ್ಪತ್ರೆಗಳಿಗೆ ತರಲ್ಪಡುವ ಹುಚ್ಚರನ್ನು ಅಲ್ಲಿ ಬರಮಾಡಿಕೊಂಡು ಅವರನ್ನು ಕಾವಲಲ್ಲಿಡುವುದನ್ನು ಕುರಿತ ನಿಬಂಧನೆಗಳ ವೈಕಿ 2ನೆ ನಿಬಂಧನೆಯ ಮೇರೆ, ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು, ಮೈಸೂರು ಚೀಫ್ ಕೋರ್ಟ್‌ನಲ್ಲಿ ತತ್ಕಾಲದಲ್ಲಿ ಮೂರನೆಯ ಜಡ್ಜ್‌ರಾಗಿರುವವರನ್ನು ಬೆಂಗಳೂರಲ್ಲಿರುವ ಹುಚ್ಚಾಸ್ಪತ್ರೆಗೆ ಸರ್ಕಾರಿ ಉದ್ಯೋಗಸ್ಥರಾದ ವಿಜಿಟರ್ ಎಂದರೆ ಹೋಗಿ ಮೇಲ್ವಿಚಾರಣೆ ನೋಡುವವರನ್ನಾಗಿ ಮೊಕರರ್ರಾಡಲು ಅಪ್ಪಣೆ ದಯಪಾಲಿಸಿರುತ್ತಾರೆ.

ತಾರೀಕು 3ನೆ ಸೆಪ್ಟಂಬರ್ 1907.

ನಂ. ಜ. 1713—ಜ. ರಿ. 7-07—12, 1907ನೆ ಇಸವಿಯ ಪ್ರಜಾ ಪ್ರತಿನಿಧಿ ಸಭೆಗೆ ಕಡೂರು, ತುಮಕೂರು, ಚಿತ್ರದುರ್ಗ, ಶಿವಮೊಗ್ಗ ಮತ್ತು ಮೈಸೂರು ಡಿಸ್ಟ್ರಿಕ್ಟ್‌ಗಳ ಡಿಸ್ಟ್ರಿಕ್ಟ್ ಬೋರ್ಡುಗಳಿಂದಲೂ ಮ್ಯುನಿಸಿಪಾಲಿಟಿಗಳಿಂದಲೂ ಅಂಗೀಕೃತವಾದ ಸಂಘಗಳಿಂದಲೂ ಸಭಿಕರಾಗಿ ನಿಯುಕ್ತರಾದ ದೊಡ್ಡ ಮನುಷ್ಯರ ಈ ಕೆಳಗೆ ಕಂಡ ಪಟ್ಟಿಯನ್ನು ಸಮಸ್ತರ ತಿಳಿವಳಿಕೆಯ ಬಗ್ಗೆ ಪ್ರಕಟಿಸಿ ಇದೆ :—

| ಚುನಾವಣೆಯ ಸ್ಥಳ. | ಪ್ರತಿನಿಧಿಗಳ ಹೆಸರು. | ಉದ್ಯೋಗ. |
|---|---|---|
| | **ಕಡೂರು ಡಿಸ್ಟ್ರಿಕ್ಟು.** | |
| ಕಡೂರು ಡಿಸ್ಟ್ರಿಕ್ಟು ಬೋರ್ಡ್ ... | 1. ಮಿ|| ಬಿ. ರಂಗಣ್ಣ .. | ಜಮೀನುದಾರ್ ಮತ್ತು ಪೆಷನರ್, ಚಿಕ್ಕಮಗಳೂರು. |
| | 2. ,, ತರೀಕೆರೆ ಶ್ರೀನಿವಾಸರಾವ್ .. | ಜಮೀನುದಾರ್ ಎಡೆಹಳ್ಳಿ |
| ಚಿಕ್ಕಮಗಳೂರು ಮ್ಯುನಿಸಿಪಾಲಿಟಿ ... | 1. ,, ಜಿ. ಅಬ್ದುಲ್ ಖಾಲಿಕ್ .. | ಮ್ಯುನಿಸಿಪಲ್ ಕಮೀಷನರ್ ಮತ್ತು ಕಾಫಿ ಪ್ಲಾಂಟರ್. |
| | 2. ,, ಎಚ್. ಪಿ. ರಾಮಸ್ವಾಮ್ಯಯ್ಯಂಗಾರ್. | ಪ್ಲೀಡರ್ |
| ತರೀಕೆರೆ ಡಿಟೋ .... | 1. ,, ಪಟೇಲ್ ಶಿವಪ್ಪ ... | ಪಟೇಲ್ |
| ಉತ್ತರ ಮೈಸೂರು ಪ್ಲಾಂಟರುಗಳ ಸಂಘ ... | 1. ,, ಸಿ. ಡಾನ್ಸರ್ ... | ಕಾಫಿಪ್ಲಾಂಟರ್, ಬಾಳೂರು |
| ಉತ್ತರ ಮೈಸೂರು ದೇಶೀಯ ಪ್ಲಾಂಟರುಗಳ ಸಂಘ. | 1. ,, ಟಿ. ನರಸಿಂಗರಾವ್ .. | ಡಿಟೋ ಚಿಕ್ಕಮಗಳೂರು |
| ಅಂಜುಮಾನಿ ಇ ಇಸ್ಲಾಮಿಯಾ ... | 1. ,, ರಸೂಲ್‌ಖಾ .. | ಕಾಫಿಪ್ಲಾಂಟರ್ ಮತ್ತು ಕಂಟ್ರಾಕ್ಟರ್ |
| | **ತುಮಕೂರು ಡಿಸ್ಟ್ರಿಕ್ಟು.** | |
| ತುಮಕೂರು ಡಿಸ್ಟ್ರಿಕ್ಟ್ ಬೋರ್ಡ್ ... | 1. ಮಿ|| ಜಿ ಶಿವರಾಮಯ್ಯ ... | ಪ್ಲೀಡರ್, ಮದ್ದಗಿರಿ |
| | 2. ,, ವೆಂಬಾರ್ ವೆಂಕಟನರಸಿಂಹಾಚಾರ್. | ಜಮೀನುದಾರ್. |
| ತುಮಕೂರು ಮ್ಯುನಿಸಿಪಾಲಿಟಿ ... | 1. ,, ಕರಣೀಕ ನಲ್ಲಪ್ಪ ... | ಡಿಟೋ |
| | 2. ,, ಮೈಲಾರಪ್ಪ .. | ವರ್ತಕ |
| | 3. ,, ವೈ. ರಾಮರಾವ್ .. | ಪ್ಲೀಡರ್ |
| | **ಚಿತ್ರದುರ್ಗ ಡಿಸ್ಟ್ರಿಕ್ಟು.** | |
| ಚಿತ್ರದುರ್ಗ ಮ್ಯುನಿಸಿಪಾಲಿಟಿ ... | 1. ಮಿ|| ಅನಂತಕೆಟ್ಟಿ .. | ಅಡ್ವೋಕೇಟ್, ಚಿತ್ರದುರ್ಗ |
| | 2. ,, ಲಕ್ಷ್ಮಿನಾರಣಪ್ಪ .. | ಪ್ಲೀಡರ್, ಚಿತ್ರದುರ್ಗ |
| ಚಿತ್ರದುರ್ಗ ಡಿಸ್ಟ್ರಿಕ್ಟ್ ಬೋರ್ಡ್ ... | 1. ,, ನೇರಲಹಳ್ಳಿ ಸಣ್ಣಪ್ಪ .. | ವರ್ತಕ, ಮೊಳಕಾಲ್ಮೂರು |
| | 2. ,, ಬಾರೆ ಸಣ್ಣಪ್ಪ ... | ಡಿಟೋ |
| ದಾವಣಗೆರೆ ಮ್ಯುನಿಸಿಪಾಲಿಟಿ ... | 1. ,, ಮಗನಹಳ್ಳಿ ಸಂಗಪ್ಪ .. | ವರ್ತಕ |
| ಹರಿಹರ ಡಿಟೋ ... | 1. ,, ರಟ್ಟಿಹಳ್ಳಿ ಗೋವಿಂದಪ್ಪ .. | ಡಿಟೋ |
| ಅಂಜುಮಾನಿ ಹಿಮಾಯತಿ ಇಸ್ಲಾಮಿಯ, ಮೊಳಕಾಲ್ಮೂರು. | 1. ,, ಪೇಕ್, ಹೊನ್ನೂರು ಸಾಹಿಬ್. | ವರ್ತಕ, ಮೊಳಕಾಲ್ಮೂರು |
| | **ಶಿವಮೊಗ್ಗ ಡಿಸ್ಟ್ರಿಕ್ಟು.** | |
| ಶಿವಮೊಗ್ಗ ಡಿಸ್ಟ್ರಿಕ್ಟು ಬೋರ್ಡ್ .. | 1. ಮಿ|| ಎ. ನರಸಿಂಹ್ಯಯ್ಯಂಗಾರ್ ... | ಪ್ಲೀಡರ್, ಸಾಗರ |
| | 2. ,, ಮರಿದೇವರ ಗುರುಸಿದ್ದಯ್ಯ | ಸಾಹುಕಾರ್, ನ್ಯಾಮತಿ |
| ಶಿವಮೊಗ್ಗ ಮ್ಯುನಿಸಿಪಾಲಿಟಿ ... | 1. ,, ಎಸ್. ಆರ್. ಬಾಲಕೃಷ್ಣರಾವ್, ಬಿ. ಎ., ಎಲ್. ಎಲ್. ಬಿ. | ಅಡ್ವೋಕೇಟ್ |
| | 2. ,, ಸೀತಾರಾಮ್ಯಯ | ಡಿಟೋ |
| | 3. ,, ಎಚ್. ರಾಮಪ್ಪ ... | ಜಮೀನ್ದಾರ್ |

| ಚುನಾವಣೆಯ ಸ್ಥಳ. | ಪ್ರತಿನಿಧಿಗಳ ಹೆಸರು. | ಉದ್ಯೋಗ. |
|---|---|---|
| | **ಶಿವಮೊಗ್ಗ ಡಿಸ್ಟ್ರಿಕ್ಟು.** | |
| ಶಿಕಾರಿಪುರ ಮ್ಯುನಿಸಿಪಾಲಿಟಿ ... | 1. ,, ಶಿವದೀಕ್ಷಿತ | ಜಮ್ಮೀದಾರ್. |
| ನಗರ ಸಭಾ ... | 1. ,, ಸಿ. ಸುಬ್ಬರಾವ್, ಬಿ. ಎ., ಬಿ. ಎಲ್. | ಅಡ್ವೊಕೇಟ್, ಶಿವಮೊಗ್ಗ |
| | **ಮೈಸೂರು ಡಿಸ್ಟ್ರಿಕ್ಟು.** | |
| ಮೈಸೂರು ಡಿಸ್ಟ್ರಿಕ್ಟ ಬೋರ್ಡ್ .. | 1. ಮಿ|| ಟಿ. ಎಸ್. ಕೃಷ್ಣರಾವ್ ... | ಕೆಲಸದಿಂದ ನಿವೃತ್ತರಾದ ಅಮಲ್ದಾರ್ |
| | 2. ,, ಬಿ. ನರಸಿಂಗರಾವ್ | ಪ್ಲೀಡರ್ |
| ಮೈಸೂರು ಸಿಟಿ ಮ್ಯುನಿಸಿಪಾಲಿಟಿ .. | 1. ,, ಎಂ. ಸಿ. ರಂಗ್ಯೆಯ್ಯಂಗಾರ್ .. | ಅಡ್ವೊಕೇಟ್ |
| | 2. ,, ಎಂ. ಅನಂತರಾಜೈಯ್ಯ .... | ಸಾಹುಕಾರ್ |
| | 3. ,, ಎಂ. ವೆಂಕಟಕೃಷ್ಣಯ್ಯ... | ಸ್ಕೂಲ್‌ಮಾಸ್ಟರ್ |
| | 4. ,, ಎಂ. ಮಾದಪ್ಪ | ಜವಳಿ ವರ್ತಕ |
| ಹುಣಸೂರು ಮ್ಯುನಿಸಿಪಾಲಿಟಿ .. | 1. ,, ಎ. ದಾಸುರಾವ್ ... | ದನಗಳ ಡಿಪ್ಪೋವಿನ ಸೂಪರ್‌ಟೆಂಡೆಂಟ್. |
| ಚಾಮರಾಜನಗರ ಮ್ಯುನಿಸಿಪಾಲಿಟಿ ... | 1. ,, ಶಾಮೈಯ್ಯಂಗಾರ್ | ಜಮ್ಮೀದಾರ್ |
| ನಂಜನಗೂಡು ಡಿಟೋ ... | 1. ,, ಇ. ರಾಮರಾವ್ | ಡಿಟೋ |
| ಬನ್ನೂರು ಡಿಟೋ ... | 1. ,, ಕೇಷವಾಚಲ ಜೋಯಿಸ್ .. | ಡಿಟೋ |
| ಶ್ರೀರಂಗಪಟ್ಟಣ ಡಿಟೋ ... | 1. ,, ಕೆ. ವಿ. ನಜುಂಡ ಶೆಟ್ಟಿ ... | ಡಿಟೋ |
| ಮಳವಳ್ಳಿ ಡಿಟೋ ... | 1. ,, ಸುಬ್ಬಯ್ಯ ಶೆಟ್ಟಿ .. | ಜಮ್ಮೀದಾರ್ ಮತ್ತು ವರ್ತಕ |
| ಶ್ರೀಯದುಗಿರಿ ಸದನಂದ ವರ್ಧಿನೀ ಸಭಾ, ಮೇಲ್ಕೋಟೆ. | 1. ,, ಅಕ್ಕಾರಕಣ್ಣಿ ರಾಮಾನುಜಾಚಾರ್. | ಪಂಡಿತರು, ಸಂಸ್ಕೃತ ಕಾಲೇಜು ಮೇಲ್ಕೋಟೆ. |

ತಾರೀಖು 3ನೆ ಸೆಪ್ಟಂಬರ್ 1907.

ನಂ. ಜ. 1707—ಜ. ರಿ. 7—07—10, 1907ನೆ ಇಸವಿಯ ಪ್ರಜಾಪ್ರತಿನಿಧಿಗಳ ಸಭೆಗೆ ಕೋಲಾರ ಡಿಸ್ಟ್ರಿಕ್ಟಿನ ಡಿಸ್ಟ್ರಿಕ್ಟ ಬೋರ್ಡಿನಿಂದಲೂ, ಮ್ಯುನಿಸಿಪಾಲಿಟಿಗಳಿಂದಲೂ ಮತ್ತು ಅಂಗೀಕರಿಸಲ್ಪಟ್ಟ ಸಂಘದಿಂದಲೂ ಸಭಿಕರಾಗಿ ನಿಯುಕ್ತರಾದ ದೊಡ್ಡ ಮನುಷ್ಯರ ಈ ಕೆಳಗೆ ಕಂಡ ಪಟ್ಟಿಯನ್ನು ಸಮಸ್ತರ ತಿಳಿವಳಿಕೆಯ ಬಗ್ಗೆ ಪ್ರಕಟಿಸಿದೆ :—

| ಚುನಾಯಿಸುವ ಸ್ಥಳ. | ಪ್ರತಿನಿಧಿಗಳ ಹೆಸರು. | ಉದ್ಯೋಗ. |
|---|---|---|
| ಕೋಲಾರ ಡಿಸ್ಟ್ರಿಕ್ಟ ಬೋರ್ಡ್ .. | 1. ಮಿ|| ಗುಡಿಬಂಡ್ಲ ಲಕ್ಷ್ಮಣರಾವ್ ... | ಪಟೇಲ್ |
| | 2. ,, ಸಿ. ನಾರಾಯಣ ಸಾಮಿಶೆಟ್ಟಿ .. | ಪ್ಲೀಡರ್ |
| ಕೋಲಾರ ಮ್ಯುನಿಸಿಪಾಲಿಟಿ .... | 1. ,, ಸಿ. ಬಿ. ಗೋಪಾಲರಾವ್ .. | ಡಿಟೋ |
| | 2. ,, ಎಂ. ಎಸ್. ರಾಮಾಚಾರ್ ... | ಡಿಟೋ |
| | 3. ,, ಮುನಿನಾರಾಯಣಶೆಟ್ಟಿ .. | ವರ್ತಕ ಮತ್ತು ಮು|| ಜೋಡ್ರು ಸಭಿಕರು. |
| ಚಿಕ್ಕಬಳ್ಳಾಪುರ ಮ್ಯುನಿಸಿಪಾಲಿಟಿ ... | 1. ,, ಇಸೂಫ್ ಖಾ ... | ವರ್ತಕ ಮತ್ತು ಕಂಟ್ರಾಕ್ಟರ್. |
| ಮುಳಬಾಗಲ್ ಡಿಟೋ ... | 1. ,, ಮಹಮದ್ ಯಾಸಿನ್‌ಸಾಬ್ ... | ಪಟೇಲ್ ಮತ್ತು ಜಮ್ಮೀದಾರ್. |
| ಶಿಡ್ಲಘಟ್ಟ ಡಿಟೋ ... | 1. ,, ಗುಡಿಬಂಡೆ ಲಕ್ಷ್ಮಣರಾವ್ ... | ಶಾನುಭೋಗ್ ಮತ್ತು ಜಮ್ಮೀದಾರ್. |
| ಕೋಲಾರ ಚಿನ್ನದ ಗಣಿಗಳ ಮೈನಿಂಗ್ ಬೋರ್ಡ್. ... | 1. ,, ಚಾರ್ಲ್ಸ್ ಎಚ್. ರಿಚರ್ಡ್ಸ್ .. | ಬಾಲಾಘಾಟ್ ಚಿನ್ನದ ಗಣಿ ಕಂಪನಿಯ ಸೂಪರ್‌ಟೆಂಡೆಂಟ್. |

ತಾರೀಖು ೧ನೆ ಸಪ್ಟೆಂಬರ್.

ನಂ. ಜ. 1846—೮೮ ರ. 7-07—15, ಬೆಂಗಳೂರು ಮಿಸ್ಟ್ರಿಕ್ಟಿನ ಮಿಸ್ಟ್ರಿಕ್ಟ್ ಬೋರ್ಡಿನಿಂದಲೂ, ಮ್ಯುನಿಸಿಪಾಲಿಟಿಗಳಿಂದಲೂ, ಮತ್ತು ಆಂಗೀಕರಿಸಲ್ಪಟ್ಟ ಸಂಘಗಳಿಂದಲೂ 1907ನೆ ವರ್ಷದ ಪ್ರಜಾಪ್ರತಿನಿಧಿಸಭೆಗೆ ಸಭಿಕರಾಗಿ ನಿಯುಕ್ತರಾದ ಮನುಷ್ಯರ ಈ ಕೆಳಗೆ ಕಂಡ ಪಟ್ಟಿಯನ್ನು ಸರ್ವಸಾಧಾರಣ ತಿಳುವಳಿಕೆಯ ಬಗ್ಗೆ ಪ್ರಕಟಿಸಿ ಇದೆ :—

| ಹುದ್ದೆಯಿರುವ ಸ್ಥಳ. | ಪ್ರತಿನಿಧಿಗಳ ಹೆಸರು. | ಉದ್ಯೋಗ. |
|---|---|---|
| ಳೂರು ಮಿಸ್ಟ್ರಿಕ್ಟ್ ಬೋರ್ಡ್ ... | 1. ಮಿ|| ಕಾಚರಕಹಳ್ಳಿ ಸುಬ್ಬಣ್ಣ .. | ಜಮೀನ್ದಾರ್ |
| | 2. ,, ಸೊಂಬೆಕೊಪ್ಪದ ದಾಸಪ್ಪ .... | ಡಿಟೋ |
| ಳೂರು ನಟ ಮ್ಯುನಿಸಿಪಾಲಿಟಿ ... | 1. ,, ಬಿ. ಗಂಗಯ್ಯ ... | ಕೆಲಸದಿಂದ ನಿವೃತ್ತರಾದ ಸಬ್ ರಿಜಿಸ್ಟ್ರಾರ್. |
| | 2. ,, ಬಿ ವೀರಭದ್ರಕೆಟ್ಟಿ ... | ಕೆಲಸದಿಂದ ನಿವೃತ್ತರಾದ ಹೆಡ್ ರಿಕಾರ್ಡ್ ಕೀಪರ್. |
| | 3. ,, ಬಿ. ಬಸಪ್ಪ .. | ವರ್ತಕ ಮತ್ತು ಯಜಮಾನ |
| | 4. ,, ಬಿ. ಅಪ್ಪಾಜಯ್ಯ .. | ಜವಳಿ ವರ್ತಕ |
| ಪಟ್ಟಿ ಡಿಟೋ .. | 1. ,, ಚಿಕ್ಕ ಅಪ್ಪ .. ... | ವರ್ತಕ |
| ಬಳ್ಳಿಪುರ ಡಿಟೋ ... | 1. ,, ಆಲಂಪಲ್ಲಿ ವೆಂಕಟ್ಟುನಾರಣಕೆಟ್ಟಿ | ಡಿಟೋ |
| ಟ್ಟಣ. ಡಿಟೋ .. | 1. ,, ರಾಮನಂಜೀವಯ್ಯ ... | ಡಿಟೋ |
| ನರೇಟ ಡಿಟೋ ... | 1. ,, ರಾಮಸ್ವಾಮಿ ಮೊದಲಿಯಾರ್. | ಕಂಟ್ರಾಕ್ಟರ್ |
| ರ ಡಿಟೋ ... | 1. ,, ಹುಚ್ಚೀರಪ್ಪ .. | ವರ್ತಕ |
| ಳೂರು ಲಾ ಅಸೋಸಿಯೇಷನ್ ಕಾನೂ ಸಂಘ. | 1. ,, ಬಿ. ಸುಬ್ಬಣ್ಣ, ಬಿ. ಎ., ಬಿ. ಎಲ್., | ಅಡ್ವೊಕೇಟ್ |
| ಳೂರು ಮತ್ತು ಬೆಂಗಳೂರಿನ ಯೂರೋ ಷಿಯನ್ ಮತ್ತು ಆಂಗ್ಲೊ ಇಂಡಿಯನ್ ಅಸೋಸಿಯೇಷನ್ ಲಿಮಿಟೆಡ್. ಯಾ ಸಂಘ. | 1. ,, ಆರ್. ಟಿ. ಟೋಕರ್ | ಸಂಘದ ಅಧ್ಯಕ್ಷ. |

ತಾರೀಖು 4ನೆ ಸೆಪ್ಟೆಂಬರ್ 1907.

ನಂ. ರ. 1740—ಲ್ಯಾ. ರ. 120-07-2, 1906ನೆ ಇಸವಿಯ ಡಿಸೆಂಬರು 21ನೆ ತಾರೀಖಿನ 6237—ಲ್ಯಾ. ರ. -06—2ನೆ ನಂಬರ ಸರ್ಕಾರ ಇಸ್ತಿಹಾರ್ನಾಮೆಯಲ್ಲಿ, ಬದಲಿ ಎಕ್ಸ್ಟ್ರಾ ಅಸಿಸ್ಟೆಂಟ್ ಕಮಿಷನರ್, ಮಿ|| ಎಂ. ಲಕ್ಷ್ಮಣರಾಗೆ ಕೊಟ್ಟ ಎರಡು ತಿಂಗಳ ಪ್ರಿವಿಲೇಜ್ ರಜಾವನ್ನು ಅವರು ಉಪಯೋಗಿಸಿಕೊಳ್ಳದೆ ಇದ್ದುದರಿಂದ ಸದರಿ ರಜಾವನ್ನು ಈ ಳ ರದ್ದುಮಾಡಿದೆ.

ಹುಕುಂ ಖಮೋಷಿವ್,
ಸಿ. ಎಸ್. ಬಾಲಸುಬ್ರಹ್ಮಣ್ಯ ಐಯ್ಯರ್,
ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರೆಟರಿ

## ಫೈನಾನ್ಷಿಯಲ್ ಡಿಪಾರ್ಟ್‌ಮೆಂಟ್.

ತಾರೀಖು 28ನೆ ಆಗಸ್ಟು 1907.

ನಂ. ಫೈ. 1023—ಬ್ಯಾಂಕಿಂಗ್ 75-06-2, ಮೈಸೂರು ಸ್ಟೇಟ್ ಲೈಫ್ ಇನ್‌ಶೂರೆನ್ಸ್ ರೂಲ್ಸ್ ಯಾ ಮೈಸೂರು ದ ಜೀವವಿಮೆಗೆ ಸಂಬಂಧಪಟ್ಟ ನಿಬಂಧನೆಗಳಲ್ಲಿ 17ನೆ ನಿಬಂಧನೆಯನ್ನು ಈ ಕೆಳಗೆ ಕಂಡಂತೆ ತಿದ್ದುಪಾಟು ಮಾಡಬೇಕೆಂ ನೂರು ಶ್ರೀಮನ್ಮಹಾರಾಜರವರ ಸರ್ಕಾರದವರು ಹುಕುಂ ಮಾಡಿರುತ್ತಾರೆ :—